## 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.40-2024

ದೋ.ಸಾ. 6
ಫ್ರಾ.ಸಾ. 6
ಪ್ರ.ವ.ಬೊ.ದಿನಾಂಕ. 24-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಶೀಲಗಂಗ |
| ತಂದೆ / ಗಂಡನ ಹೆಸರು | - | ಪ್ರಕಾಶ್ |
| ವಯಸ್ಸು | - | 67 |
| ಉದ್ಯೋಗ | - | ಗೃಹಿಣಿ |
| ವಾಸ ಸ್ಥಳ | - | ದಾವಣಗೆರೆ |

ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಫ್ರಾ.ಸಾ.1 ನನ್ನ ಸೊಸೆ. ಫ್ರಾ.ಸಾ.2 ಹಾಗೂ ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಕ್ಕಳು. ಫ್ರಾ.ಸಾ.3 ನನ್ನ ಗಂಡ. ನನಗೆ ಫ್ರಾ.ಸಾ.4 ಮತ್ತು 5 ರವರ ಪರಿಚಯ ಇರುತ್ತದೆ. ನನ್ನ ಸೊಸೆ ಫ್ರಾ.ಸಾ.1 ಹಾಗೂ ಆಕೆಯ ಗಂಡ ನನ್ನ ಮಗ ಫ್ರಾ.ಸಾ.2 ರವರು ಈ ಮೊದಲು ದಾವಣಗೆರೆಯ ಮೆಡಿಕಲ್ ಸೈನ್ಸ್ ಕಾಲೇಜಿನಲ್ಲಿ ರೀಡರ್ ಆಗಿ ವೃತ್ತಿ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ಇನ್ನೊಬ್ಬ ಮಗ ಆರೋಪಿಯು ಮನೆಯಲ್ಲಿಯೇ ಇದ್ದನು ಮತ್ತು ಆತ ಮಾನಸಿಕವಾಗಿ ಆರೋಗ್ಯದಿಂದ ಇದ್ದನು. ಆರೋಪಿಯು ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಕೂಡ ಮಾಡಿರುತ್ತಾನೆ.

2024 ರ ಜನವರಿ 2 ರಂದು ಮದ್ಯಾಹ್ನದ ಸಮಯದಲ್ಲಿ ಫ್ರಾ.ಸಾ.1 ರವರು ತನ್ನ ಮಗುವಿಗೆ ಊಟ ಮಾಡಿಸುತ್ತಿರುವಾಗ ಟಿವಿ ತೋರಿಸುತ್ತ ಊಟ ಮಾಡಿಸುತ್ತಿದ್ದು, ಆಗ ಆರೋಪಿಯು ಬಂದು ಟಿವಿಯ ವಾಲ್ಯೂಮ್ ಕಡಿಮೆ ಮಾಡಿದ್ದು, ಅದನ್ನು ಗಮನಿಸದೇ ನನ್ನ ಮಗ ಫ್ರಾ.ಸಾ.2 ರವರು ಟಿವಿ ವಾಲ್ಯೂಮ್ ಹೆಚ್ಚಿಸಿದ್ದು, ಆ ಕಾರಣ ಮನೆಯಲ್ಲಿ ಅವರವರ ನಡುವೆ ಬಾಯಿ ಮಾತಿನ ಚಕಮಕಿ ಆಗಿದ್ದು, ಆದನ್ನು ಹೊರತುಪಡಿಸಿ ನನಗೆ ಬೇರೆ ವಿಷಯ ತಿಳಿದಿರುವುದಿಲ್ಲ. ನನ್ನ ಸಮಕ್ಷಮ ಆರೋಪಿಯು ಫ್ರಾ.ಸಾ.1 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ಹಲ್ಲೆ ಮಾಡಿದ್ದಾಗಲಿ, ಆಗ ಬಿಡಿಸಲು ಹೋದ ಫ್ರಾ.ಸಾ.2 ರವರಿಗೆ ಮಚ್ಚು ತಾಗಿ ಗಾಯವಾಗಿದ್ದಾಗಲಿ ಹಾಗೂ ಆ ಸಮಯದಲ್ಲಿ ಆರೋಪಿಯು ಅವರಿಬ್ಬರಿಗೂ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಫ್ರಾ.ಸಾ.1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ ಇರುವುದಿಲ್ಲ.

ನನಗೆ ಈಗ ತೋರಿಸುತ್ತಿರುವ ಮು.ಮಾ.1 ಮತ್ತು 3 ರ ಕುರಿತು ತಿಳಿದಿರುವುದಿಲ್ಲ. ನಿ.ಪಿ.3 ಮತ್ತು 4 ರಲ್ಲಿ ತೋರುತ್ತಿರುವ ಮನೆಯು ನನ್ನ ಮನೆಯಾಗಿರುತ್ತದೆ. ನನ್ನನ್ನು ಈ ಪ್ರಕರಣದ ಕುರಿತಾಗಿ ಪೋಲೀಸರು ವಿಚಾರಣೆ ಮಾಡಿರುವುದಿಲ್ಲ. ನಾನು ಆ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.**

ಸದರಿ ದಿನ ಮದ್ಯಾಹ್ನ 1-45 ಗಂಟೆ ಸಮಯದಲ್ಲಿ ಟಿವಿ ವಿಷಯಕ್ಕೆ ಸಂಬಂಧಿಸಿ ಜಗಳವಾಡಿದ್ದಲ್ಲದೇ, ಆರೋಪಿಯು ಫ್ರಾ.ಸಾ.1 ರವರ ಜೊತೆ ಅಸಭ್ಯವಾಗಿ ನಡೆದುಕೊಳ್ಳುತ್ತ, ಆಕೆಯ ಮೈಕೈ ಮುಟ್ಟಿ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಲ್ಲದೇ, ಕೈ ಮುಷ್ಟಿಯಿಂದ ಆಕೆಗೆ ಹಲ್ಲೆ ಮಾಡಿ, ನಂತರ ಆಕೆಯನ್ನು ಕೊಲೆ ಮಾಡಲು ನಮ್ಮ ಮನೆಯಲ್ಲಿ ಇದ್ದ ಮು.ಮಾ.1 ಮಚ್ಚನ್ನು ತೆಗೆದುಕೊಂಡು ಬಂದು ಬೀಸಿದ್ದು, ಆಗ ಅದು ಫ್ರಾ.ಸಾ.1 ರವರ ಬಲಪಕ್ಕೆಗೆ ತಾಗಿರುತ್ತದೆ ಎಂದರೆ ಸರಿಯಲ್ಲ. ಆಗ ಬಿಡಿಸಲು ಫ್ರಾ.ಸಾ.2 ರವರು ಹೋಗಿದ್ದು, ಆಗ ಪುನಃ ಆರೋಪಿಯು ಮಚ್ಚನ್ನು ಫ್ರಾ.ಸಾ.1 ರವರ ಕಡೆ ಬೀಸಿದಾಗ ಅದನ್ನು ಫ್ರಾ.ಸಾ.2 ರವರು ತಡೆದಿದ್ದು, ಆಗ ಫ್ರಾ.ಸಾ.2 ರವರ ಕೈಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲದೇ ಆರೋಪಿಯು ಆ ಸಮಯದಲ್ಲಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಫ್ರಾ.ಸಾ.1 ಮತ್ತು ಫ್ರಾ.ಸಾ.2 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ನಂತರ ಫ್ರಾ.ಸಾ.1 ರವರು ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಬಳಿಕ ಪೋಲೀಸರು ನನ್ನನ್ನು ವಿಚಾರಿಸಿದ್ದು, ಆಗ ನಾನು ಈಗ ಓದಿ ಹೇಳಿದಂತೆ ಪೋಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.13 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಮಗನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2026.01.27 17:01:27 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.40-2024

ದೋ.ಸಾ. 8
ಫ್ರಾ.ಸಾ. 5
ಪ್ರ.ವ.ಬೊ.ದಿನಾಂಕ. 24-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಪ್ರಕಾಶ |
| ತಂದೆ / ಗಂಡನ ಹೆಸರು | - | ವಿಜಯಕುಮಾರ್ |
| ವಯಸ್ಸು | - | 53 |
| ಉದ್ಯೋಗ | - | ಖಾಸಗಿ ಉದ್ಯೋಗ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಫ್ರಾ.ಸಾ.1 ರಿಂದ 4 ಹಾಗೂ ಚಾ.ಸಾ.6 ರವರ ಪರಿಚಯ ಇರುತ್ತದೆ. ಅದೇ ರೀತಿ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇರುತ್ತದೆ. ಫ್ರಾ.ಸಾ.3 ರವರ ಮನೆಯು ನನ್ನ ಮನೆಯ ಪಕ್ಕದಲ್ಲಿ ಇದ್ದು, ಅವರ ಮನೆಯಲ್ಲಿ ಈ ಮೊದಲು ಫ್ರಾ.ಸಾ.1 ಮತ್ತು ಫ್ರಾ.ಸಾ.2 ರವರು ಆರೋಪಿ ಹಾಗೂ ಫ್ರಾ.ಸಾ.3 ಮತ್ತು ಚಾ.ಸಾ.6 ರವರ ಜೊತೆ ವಾಸವಿದ್ದರು.

ನನಗೆ ಈ ಪ್ರಕರಣದ ವಿಚಾರ ತಿಳಿದಿರುವುದಿಲ್ಲ. ಆರೋಪಿಯು ನನ್ನ ಸಮಕ್ಷಮ ಫ್ರಾ.ಸಾ.1 ಮತ್ತು 2 ರವರಿಗೆ ಯಾವುದೇ ತೊಂದರೆ ನೀಡಿದ್ದು ಇರುವುದಿಲ್ಲ. ದಿಃ 02-01-2024 ರಂದು ಮದ್ಯಾಹ್ನದ ಅವಧಿಯಲ್ಲಿ ನಾನು ಫ್ರಾ.ಸಾ.3 ರವರ ಮನೆಯಲ್ಲಿ ಗಲಾಟೆ ಕೇಳಿ ಅಲ್ಲಿಗೆ ಹೋದದ್ದು ಇರುವುದಿಲ್ಲ. ಅಲ್ಲಿ ನನ್ನ ಸಮಕ್ಷಮ ಆರೋಪಿಯು ಫ್ರಾ.ಸಾ.1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ, ಆಕೆಗೆ ಕೈಗಳಿಂದ ಹಲ್ಲಿ ಮಾಡಿದ್ದಾಗಲಿ ಮತ್ತು ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ಹಲ್ಲೆ ಮಾಡಿದ್ದಾಗಲಿ, ಆಗ ಬಿಡಿಸಲು ಹೋದ ಫ್ರಾ.ಸಾ.2 ರವರಿಗೆ ಮಚ್ಚು ತಾಗಿ ಗಾಯವಾಗಿದ್ದಾಗಲಿ ಹಾಗೂ ಆ ಸಮಯದಲ್ಲಿ ಆರೋಪಿಯು ಅವರಿಬ್ಬರಿಗೂ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಫ್ರಾ.ಸಾ.1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ ಇರುವುದಿಲ್ಲ. ನನಗೆ ಈಗ ತೋರಿಸುತ್ತಿರುವ ಮು.ಮಾ.1 ಮತ್ತು 3 ರ ಕುರಿತು ತಿಳಿದಿರುವುದಿಲ್ಲ. ನಿ.ಪಿ.3 ಮತ್ತು 4 ರಲ್ಲಿ ತೋರುತ್ತಿರುವ ಮನೆಯು ಫ್ರಾ.ಸಾ.3 ರವರ ಮನೆಯಾಗಿರುತ್ತದೆ. ನನ್ನನ್ನು ಈ ಪ್ರಕರಣದ ಕುರಿತಾಗಿ ಪೋಲೀಸರು ವಿಚಾರಣೆ ಮಾಡಿರುವುದಿಲ್ಲ. ನಾನು ಆ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.**

ಸದರಿ ದಿನ ಮದ್ಯಾಹ್ನ 1-45 ಗಂಟೆ ಸಮಯದಲ್ಲಿ ಟಿವಿ ವಿಷಯಕ್ಕೆ ಸಂಬಂಧಿಸಿ ಫ್ರಾ.ಸಾ.3 ರವರ ಮನೆಯಲ್ಲಿ ಜಗಳ ಕೇಳಿ ನಾನು ಅಲ್ಲಿಗೆ ಹೋದಾಗ ಆರೋಪಿಯು ಫ್ರಾ.ಸಾ.1 ರವರ ಜೊತೆ ಅಸಭ್ಯವಾಗಿ ನಡೆದುಕೊಳ್ಳುತ್ತ,

ಆಕೆಯ ಮೈಕೈ ಮುಟ್ಟಿ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಲ್ಲದೇ, ಕೈ ಮುಷ್ಟಿಯಿಂದ ಆಕೆಗೆ ಹಲ್ಲೆ ಮಾಡಿ, ನಂತರ ಆಕೆಯನ್ನು ಕೊಲೆ ಮಾಡಲು ಅವರ ಮನೆಯಲ್ಲಿ ಇದ್ದ ಮು.ಮಾ.1 ಮಚ್ಚನ್ನು ತೆಗೆದುಕೊಂಡು ಬಂದು ಬೀಸಿದ್ದು, ಆಗ ಅದು ಪ್ರಾ.ಸಾ.1 ರವರ ಬಲಪಕ್ಕೆಗೆ ತಾಗಿರುತ್ತದೆ ಎಂದರೆ ಸರಿಯಲ್ಲ. ಆಗ ಬಿಡಿಸಲು ಪ್ರಾ.ಸಾ.2 ರವರು ಹೋಗಿದ್ದು, ಆಗ ಪುನಃ ಆರೋಪಿಯು ಮಚ್ಚನ್ನು ಪ್ರಾ.ಸಾ.1 ರವರ ಕಡೆ ಬೀಸಿದಾಗ ಅದನ್ನು ಪ್ರಾ.ಸಾ.2 ರವರು ತಡೆದಿದ್ದು, ಆಗ ಪ್ರಾ.ಸಾ.2 ರವರ ಕೈಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲದೇ ಆರೋಪಿಯು ಆ ಸಮಯದಲ್ಲಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪ್ರಾ.ಸಾ.1 ಮತ್ತು ಪ್ರಾ.ಸಾ.2 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ನಂತರ ಪ್ರಾ.ಸಾ.1 ರವರು ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಬಳಿಕ ಪೋಲೀಸರು ನನ್ನನ್ನು ವಿಚಾರಿಸಿದ್ದು, ಆಗ ನಾನು ಈಗ ಓದಿ ಹೇಳಿದಂತೆ ಪೋಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಮನೆಯ ಪಕ್ಕದವನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.27 17:01:40 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.40-2024

ದೋ.ಸಾ. 7
ಫ್ರಾ.ಸಾ. 4
ಪ್ರ.ವ.ಬೊ.ದಿನಾಂಕ. 24-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಕುಮಾರ |
| ತಂದೆ / ಗಂಡನ ಹೆಸರು | - | ಶರಣಪ್ಪ |
| ವಯಸ್ಸು | - | 40 |
| ಉದ್ಯೋಗ | - | ಖಾಸಗಿ ಉದ್ಯೋಗ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಫ್ರಾ.ಸಾ.1 ರಿಂದ 3 ಹಾಗೂ ಚಾ.ಸಾ.6 ಮತ್ತು 8 ರವರ ಪರಿಚಯ ಇರುತ್ತದೆ. ಅದೇ ರೀತಿ ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ನನಗೆ ಇರುತ್ತದೆ. ಫ್ರಾ.ಸಾ.3 ರವರ ಮನೆಯು ನನ್ನ ಮನೆಯ ಪಕ್ಕದಲ್ಲಿ ಇದ್ದು, ಅವರ ಮನೆಯಲ್ಲಿ ಈ ಮೊದಲು ಫ್ರಾ.ಸಾ.1 ಮತ್ತು ಫ್ರಾ.ಸಾ.2 ರವರು ಆರೋಪಿ ಹಾಗೂ ಫ್ರಾ.ಸಾ.3 ಮತ್ತು ಚಾ.ಸಾ.6 ರವರ ಜೊತೆ ವಾಸವಿದ್ದರು.

ನನಗೆ ಈ ಪ್ರಕರಣದ ವಿಚಾರ ತಿಳಿದಿರುವುದಿಲ್ಲ. ಆರೋಪಿಯು ನನ್ನ ಸಮಕ್ಷಮ ಫ್ರಾ.ಸಾ.1 ಮತ್ತು 2 ರವರಿಗೆ ಯಾವುದೇ ತೊಂದರೆ ನೀಡಿದ್ದು ಇರುವುದಿಲ್ಲ. ದಿಃ 02-01-2024 ರಂದು ಮದ್ಯಾಹ್ನದ ಅವಧಿಯಲ್ಲಿ ನಾನು ಫ್ರಾ.ಸಾ.3 ರವರ ಮನೆಯಲ್ಲಿ ಗಲಾಟೆ ಕೇಳಿ ಅಲ್ಲಿಗೆ ಹೋದದ್ದು ಇರುವುದಿಲ್ಲ. ಅಲ್ಲಿ ನನ್ನ ಸಮಕ್ಷಮ ಆರೋಪಿಯು ಫ್ರಾ.ಸಾ.1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ, ಆಕೆಗೆ ಕೈಗಳಿಂದ ಹಲ್ಲಿ ಮಾಡಿದ್ದಾಗಲಿ ಮತ್ತು ಆಕೆಯನ್ನು ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ಹಲ್ಲೆ ಮಾಡಿದ್ದಾಗಲಿ, ಆಗ ಬಿಡಿಸಲು ಹೋದ ಫ್ರಾ.ಸಾ.2 ರವರಿಗೆ ಮಚ್ಚು ತಾಗಿ ಗಾಯವಾಗಿದ್ದಾಗಲಿ ಹಾಗೂ ಆ ಸಮಯದಲ್ಲಿ ಆರೋಪಿಯು ಅವರಿಬ್ಬರಿಗೂ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಫ್ರಾ.ಸಾ.1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ ಇರುವುದಿಲ್ಲ. ನನಗೆ ಈಗ ತೋರಿಸುತ್ತಿರುವ ಮು.ಮಾ.1 ಮತ್ತು 3 ರ ಕುರಿತು ತಿಳಿದಿರುವುದಿಲ್ಲ. ನಿ.ಪಿ.3 ಮತ್ತು 4 ರಲ್ಲಿ ತೋರುತ್ತಿರುವ ಮನೆಯು ಫ್ರಾ.ಸಾ.3 ರವರ ಮನೆಯಾಗಿರುತ್ತದೆ. ನನ್ನನ್ನು ಈ ಪ್ರಕರಣದ ಕುರಿತಾಗಿ ಪೋಲೀಸರು ವಿಚಾರಣೆ ಮಾಡಿರುವುದಿಲ್ಲ. ನಾನು ಆ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.**

ಸದರಿ ದಿನ ಮದ್ಯಾಹ್ನ 1-45 ಗಂಟೆ ಸಮಯದಲ್ಲಿ ಟಿವಿ ವಿಷಯಕ್ಕೆ ಸಂಬಂಧಿಸಿ ಫ್ರಾ.ಸಾ.3 ರವರ ಮನೆಯಲ್ಲಿ ಜಗಳ ಕೇಳಿ ನಾನು ಅಲ್ಲಿಗೆ ಹೋದಾಗ ಆರೋಪಿಯು ಫ್ರಾ.ಸಾ.1 ರವರ ಜೊತೆ ಅಸಭ್ಯವಾಗಿ ನಡೆದುಕೊಳ್ಳುತ್ತ,

ಆಕೆಯ ಮೈಕೈ ಮುಟ್ಟಿ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಲ್ಲದೇ, ಕೈ ಮುಷ್ಟಿಯಿಂದ ಆಕೆಗೆ ಹಲ್ಲೆ ಮಾಡಿ, ನಂತರ ಆಕೆಯನ್ನು ಕೊಲೆ ಮಾಡಲು ಅವರ ಮನೆಯಲ್ಲಿ ಇದ್ದ ಮು.ಮಾ.1 ಮಚ್ಚನ್ನು ತೆಗೆದುಕೊಂಡು ಬಂದು ಬೀಸಿದ್ದು, ಆಗ ಅದು ಫ್ರಾ.ಸಾ.1 ರವರ ಬಲಪಕ್ಕೆಗೆ ತಾಗಿರುತ್ತದೆ ಎಂದರೆ ಸರಿಯಲ್ಲ. ಆಗ ಬಿಡಿಸಲು ಫ್ರಾ.ಸಾ.2 ರವರು ಹೋಗಿದ್ದು, ಆಗ ಪುನಃ ಆರೋಪಿಯು ಮಚ್ಚನ್ನು ಫ್ರಾ.ಸಾ.1 ರವರ ಕಡೆ ಬೀಸಿದಾಗ ಅದನ್ನು ಫ್ರಾ.ಸಾ.2 ರವರು ತಡೆದಿದ್ದು, ಆಗ ಫ್ರಾ.ಸಾ.2 ರವರ ಕೈಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲದೇ ಆರೋಪಿಯು ಆ ಸಮಯದಲ್ಲಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಫ್ರಾ.ಸಾ.1 ಮತ್ತು ಫ್ರಾ.ಸಾ.2 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ನಂತರ ಫ್ರಾ.ಸಾ.1 ರವರು ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಬಳಿಕ ಪೋಲೀಸರು ನನ್ನನ್ನು ವಿಚಾರಿಸಿದ್ದು, ಆಗ ನಾನು ಈಗ ಓದಿ ಹೇಳಿದಂತೆ ಪೋಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.11 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಮನೆಯ ಪಕ್ಕದವನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.27 17:01:53 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.40-2024

ದೋ.ಸಾ. 5
ಫ್ರಾ.ಸಾ. 3
ಪ್ರ.ವ.ಬೊ.ದಿನಾಂಕ. 24-01-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಪ್ರಕಾಶ್ |
| ತಂದೆ / ಗಂಡನ ಹೆಸರು | - | ಪರ್ವತಾಚಾರ್ |
| ವಯಸ್ಸು | - | 70 |
| ಉದ್ಯೋಗ | - | ನಿವೃತ್ತ ಎಸ್ ಡಿ ಎ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಫ್ರಾ.ಸಾ.1 ನನ್ನ ಸೊಸೆ. ಫ್ರಾ.ಸಾ.2 ಹಾಗೂ ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಮಕ್ಕಳು. ಚಾ.ಸಾ.6 ನನ್ನ ಹೆಂಡತಿ. ನನಗೆ ಚಾ.ಸಾ.7 ಮತ್ತು 8 ರವರ ಪರಿಚಯ ಇರುತ್ತದೆ. ನನ್ನ ಸೊಸೆ ಫ್ರಾ.ಸಾ.1 ಹಾಗೂ ಆಕೆಯ ಗಂಡ ನನ್ನ ಮಗ ಫ್ರಾ.ಸಾ.2 ರವರು ಈ ಮೊದಲು ದಾವಣಗೆರೆಯ ಮೆಡಿಕಲ್ ಸೈನ್ಸ್ ಕಾಲೇಜಿನಲ್ಲಿ ರೀಡರ್ ಆಗಿ ವೃತ್ತಿ ಮಾಡುತ್ತಿದ್ದರು. ಆ ಸಮಯದಲ್ಲಿ ನನ್ನ ಇನ್ನೊಬ್ಬ ಮಗ ಆರೋಪಿಯು ಮನೆಯಲ್ಲಿಯೇ ಇದ್ದನು ಮತ್ತು ಆತ ಮಾನಸಿಕವಾಗಿ ಆರೋಗ್ಯದಿಂದ ಇದ್ದನು. ಆರೋಪಿಯು ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಕೂಡ ಮಾಡಿರುತ್ತಾನೆ.

2024 ರ ಜನವರಿ 2 ರಂದು ಮದ್ಯಾಹ್ನದ ಸಮಯದಲ್ಲಿ ಫ್ರಾ.ಸಾ.1 ರವರು ತನ್ನ ಮಗುವಿಗೆ ಊಟ ಮಾಡಿಸುತ್ತಿರುವಾಗ ಟಿವಿ ತೋರಿಸುತ್ತ ಊಟ ಮಾಡಿಸುತ್ತಿದ್ದು, ಆಗ ಆರೋಪಿಯು ಬಂದು ಟಿವಿಯ ವಾಲ್ಯೂಮ್ ಕಡಿಮೆ ಮಾಡಿದ್ದು, ಅದನ್ನು ಗಮನಿಸದೇ ನನ್ನ ಮಗ ಫ್ರಾ.ಸಾ.2 ರವರು ಟಿವಿ ವಾಲ್ಯೂಮ್ ಹೆಚ್ಚಿಸಿದ್ದು, ಆ ಕಾರಣ ಮನೆಯಲ್ಲಿ ಅವರವರ ನಡುವೆ ಬಾಯಿ ಮಾತಿನ ಚಕಮಕಿ ಆಗಿದ್ದು, ಆದನ್ನು ಹೊರತುಪಡಿಸಿ ನನಗೆ ಬೇರೆ ವಿಷಯ ತಿಳಿದಿರುವುದಿಲ್ಲ. ನನ್ನ ಸಮಕ್ಷಮ ಆರೋಪಿಯು ಫ್ರಾ.ಸಾ.1 ರವರಿಗೆ ಕೊಲೆ ಮಾಡುವ ಉದ್ದೇಶದಿಂದ ಮಚ್ಚಿನಿಂದ ಹಲ್ಲೆ ಮಾಡಿದ್ದಾಗಲಿ, ಆಗ ಬಿಡಿಸಲು ಹೋದ ಫ್ರಾ.ಸಾ.2 ರವರಿಗೆ ಮಚ್ಚು ತಾಗಿ ಗಾಯವಾಗಿದ್ದಾಗಲಿ ಹಾಗೂ ಆ ಸಮಯದಲ್ಲಿ ಆರೋಪಿಯು ಅವರಿಬ್ಬರಿಗೂ ಅವಾಚ್ಯ ಶಬ್ದಗಳಿಂದ ಬೈದು ಜೀವ ಬೆದರಿಕೆ ಹಾಕಿದ್ದಾಗಲಿ ಹಾಗೂ ಫ್ರಾ.ಸಾ.1 ರವರ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಾಗಲಿ ಇರುವುದಿಲ್ಲ.

ನನಗೆ ಈಗ ತೋರಿಸುತ್ತಿರುವ ಮು.ಮಾ.1 ಮತ್ತು 3 ರ ಕುರಿತು ತಿಳಿದಿರುವುದಿಲ್ಲ. ನಿ.ಪಿ.3 ಮತ್ತು 4 ರಲ್ಲಿ ತೋರುತ್ತಿರುವ ಮನೆಯು ನನ್ನ ಮನೆಯಾಗಿರುತ್ತದೆ. ನನ್ನನ್ನು ಈ ಪ್ರಕರಣದ ಕುರಿತಾಗಿ ಪೋಲೀಸರು ವಿಚಾರಣೆ ಮಾಡಿರುವುದಿಲ್ಲ. ನಾನು ಆ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.**

ಸದರಿ ದಿನ ಮದ್ಯಾಹ್ನ 1-45 ಗಂಟೆ ಸಮಯದಲ್ಲಿ ಟಿವಿ ವಿಷಯಕ್ಕೆ ಸಂಬಂಧಿಸಿ ಜಗಳವಾಡಿದ್ದಲ್ಲದೇ, ಆರೋಪಿಯು ಪ್ರಾ.ಸಾ.1 ರವರ ಜೊತೆ ಅಸಭ್ಯವಾಗಿ ನಡೆದುಕೊಳ್ಳುತ್ತ, ಆಕೆಯ ಮೈಕೈ ಮುಟ್ಟಿ ಮಾನಕ್ಕೆ ಕುಂದು ಬರುವ ರೀತಿಯಲ್ಲಿ ವರ್ತಿಸಿದ್ದಲ್ಲದೇ, ಕೈ ಮುಷ್ಟಿಯಿಂದ ಆಕೆಗೆ ಹಲ್ಲೆ ಮಾಡಿ, ನಂತರ ಆಕೆಯನ್ನು ಕೊಲೆ ಮಾಡಲು ನಮ್ಮ ಮನೆಯಲ್ಲಿ ಇದ್ದ ಮು.ಮಾ.1 ಮಚ್ಚನ್ನು ತೆಗೆದುಕೊಂಡು ಬಂದು ಬೀಸಿದ್ದು, ಆಗ ಅದು ಪ್ರಾ.ಸಾ.1 ರವರ ಬಲಪಕ್ಕೆಗೆ ತಾಗಿರುತ್ತದೆ ಎಂದರೆ ಸರಿಯಲ್ಲ. ಆಗ ಬಿಡಿಸಲು ಪ್ರಾ.ಸಾ.2 ರವರು ಹೋಗಿದ್ದು, ಆಗ ಪುನಃ ಆರೋಪಿಯು ಮಚ್ಚನ್ನು ಪ್ರಾ.ಸಾ.1 ರವರ ಕಡೆ ಬೀಸಿದಾಗ ಅದನ್ನು ಪ್ರಾ.ಸಾ.2 ರವರು ತಡೆದಿದ್ದು, ಆಗ ಪ್ರಾ.ಸಾ.2 ರವರ ಕೈಗೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ. ಅಲ್ಲದೇ ಆರೋಪಿಯು ಆ ಸಮಯದಲ್ಲಿ ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿರುತ್ತಾನೆ ಎಂದರೆ ಸರಿಯಲ್ಲ. ನಂತರ ಪ್ರಾ.ಸಾ.1 ಮತ್ತು ಪ್ರಾ.ಸಾ.2 ರವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು, ನಂತರ ಪ್ರಾ.ಸಾ.1 ರವರು ಆರೋಪಿಯ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಬಳಿಕ ಪೋಲೀಸರು ನನ್ನನ್ನು ವಿಚಾರಿಸಿದ್ದು, ಆಗ ನಾನು ಈಗ ಓದಿ ಹೇಳಿದಂತೆ ಪೋಲೀಸರಿಗೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಆರೋಪಿಯು ನನ್ನ ಮಗನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.**

ಇರುವುದಿಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2026.01.27 17:02:01 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.